**ಡಿ.ಡಬ್ಲೂ–೧**

ದಿ: ೧೪–೧೧–೨೦೨೫ ರಂದು ಆರೋಪಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

ಹೆಸರು : ಕೃಷ್ಣಪ್ಪ
ತಂದೆಯ ಹೆಸರು : ಬಜ್ಜಪ್ಪ
ವಯಸ್ಸು : ೪೬ ವರ್ಷ
ಉದ್ಯೋಗ : ವ್ಯಾಪಾರ
ವಾಸಸ್ಥಳ : ಯನ್ನಾಗರ

ಮುಖ್ಯ ವಿಚಾರಣೆ : ಆರೋಪಿ ಪರವಾಗಿ ಶ್ರೀಯುತ ಜಿ.ಎ.ಎಸ್. ವಕೀಲರಿಂದ.

ನನಗೆ ಪಿರ್ಯಾದಿದಾರರು ರಾಜಮ್ಮ ಎನ್ನುವವರಿಂದ ಪರಿಚಯ ಆಗಿರುತ್ತಾರೆ. ಸದರಿ ಪಿರ್ಯಾದಿದಾರರು ಹೊಸಕೋಟೆ ತಾಲ್ಲೂಕಿನ ದಾಸರಹಳ್ಳಿಯಲ್ಲಿ ಒಂದು ಜಮೀನು ಇರುವುದಾಗಿ ನನಗೆ ತಿಳಿಸಿರುತ್ತಾರೆ. ಸದರಿ ಜಮೀನಿನ ಖರೀದಿಯ ಭದ್ರತೆ ಸಲುವಾಗಿ ನನಗೆ ಸಂಬಂಧಿಸಿದ ೫ ಚೆಕ್ಕುಗಳನ್ನು ಪಿರ್ಯಾದಿದಾರರಿಗೆ ನೀಡಿದ್ದೆ. ಸದರಿ ಪಿರ್ಯಾದಿದಾರರು ನನ್ನಿಂದ ಪಡೆದುಕೊಂಡಿದ್ದ ಐದು ಚೆಕ್ಕುಗಳ ಪೈಕಿ ಎರಡು ಚೆಕ್ಕುಗಳನ್ನು ಅಮಾನ್ಯಗೊಳಿಸಿ ಪ್ರಕರಣ ದಾಖಲಿಸಿರುತ್ತಾರೆ ಮತ್ತು ಮುನಿಯಪ್ಪರವರು ರಾಜೇಶ್ ರವರ ಮೂಲಕ ಮತ್ತೆರಡು ಚೆಕ್ಕುಗಳನ್ನು ಅಮಾನ್ಯಗೊಳಿಸಿ ನನ್ನ ವಿರುದ್ದ ಚೆಕ್ಕು ಅಮಾನ್ಯಗೊಂಡ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ನಾನು ಪಿರ್ಯಾದಿದಾರರಿಂದ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ ಮತ್ತು ಯಾವುದೇ ಹಣದ ಮರುಪಾವತಿ ಸಲುವಾಗಿ ನಿಪಿ.೧ ಮತ್ತು ೨ ಚೆಕ್ಕುಗಳನ್ನು ನೀಡಿರುವುದಿಲ್ಲ. ಆದ್ದರಿಂದ ಪ್ರಸ್ತುತ ಪಿರ್ಯಾದನ್ನು ವಜಾಗೊಳಿಸಿ ನನ್ನನ್ನು ನಿರಪರಾಧಿ ಎಂದು ಘೋಷಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಾಟೀ ಸವಾಲು: ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**